**ಕರ್ನಾಟಕ ಸರ್ಕಾರ**

**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಚುನಾವಣೆ/ಮೀಸಲಾತಿ/43/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ 29 .01.2014

**ಗೆ,**

ಸಹಕಾರ ಸಂಘಗಳ ಉಪ ನಿಬಂಧಕರು
/ಜಿಲ್ಲಾ ಚುನಾವಣಾಧಿಕಾರಿಗಳು (ಪ್ರಾಥಮಿಕ ಸಂಘಗಳು)
-----------------ಜಿಲ್ಲೆ
----------------

ಮಾನ್ಯರೇ,

**ವಿಷಯ:-** ಸಹಕಾರ ಸಂಘಗಳ ಆಡಳಿತ ಮಂಡಳಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮತ್ತು ಹಿಂದುಳಿದವರ ವರ್ಗದವರಿಗೆ ಮೀಸಲಾತಿ ಕಲ್ಪಿಸಿರುವಿಕೆ ಸಂಬಂಧಿಸಿದ ವರ್ಗಕ್ಕೆ ಸೇರಿರುವರೆಂಬ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ ಪಡೆಯುವಿಕೆ ಕುರಿತು.

****

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 28-ಎ (3) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 24 ರಂತೆ ಬಿಡಿ ವ್ಯಕ್ತಿಗಳನ್ನು ಸದಸ್ಯರಾಗಿ ಹೊಂದಿರುವ ಸಹಕಾರ ಸಂಘಗಳ ಆಡಳಿತ ಮಂಡಳಿಯಲ್ಲಿ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಕ್ಕೆ ಸೇರಿದ/ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಚುನಾವಣೆ ಮೂಲಕ ಭರ್ತಿ ಮಾಡುವುದಕ್ಕಾಗಿ ಮೀಸಲಾತಿ ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14ಎ(1) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ರ ನಿಯಮ 5ಎಫ್‌ದ ರೀತ್ಯಾ ಸಂಬಂಧಿಸಿದ ವರ್ಗಗಳ ಸದಸ್ಯರು /ಅಭ್ಯರ್ಥಿಗಳು ಮಂಡಲಿ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರದ ಜತೆ ಸಕ್ಷಮ ಪ್ರಾಧಿಕಾರವು ನೀಡಿದ ದೃಢೀಕರಣವನ್ನು ಲಗತ್ತಿಸಿ ಸಲ್ಲಿಸಬೇಕಾಗಿರುತ್ತದೆ.

ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) ನಿಯಮಗಳು, 1993 ರ ನಿಯಮ 2(8) (ಎ) ರೀತ್ಯಾ ಜಾತಿ ಪ್ರಮಾಣಪತ್ರವನ್ನು ನೀಡಲು ತಾಲ್ಲೂಕಿನ ತಹಸೀಲ್ದಾರ್ ಸಕ್ಷಮ ಪ್ರಾಧಿಕಾರಯಾಗಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:RDP/5/ZPS/95(i) ಬೆಂಗಳೂರು ದಿನಾಂಕ:13.01.1995 ರೀತ್ಯಾ ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಹಿಂದುಳಿದ ವರ್ಗಗಳಿಗೆ ಸ್ಥಾನಗಳನ್ನು ಮೀಸಲಾತಿ ನೀಡುವ ಸಂಬಂಧ ಪ್ರವರ್ಗ "ಎ" (Category "A" ) ಮತ್ತು ಪ್ರವರ್ಗ "ಬಿ"(Category "B" ) ಗಳಿಗೆ ಸೇರುವ ಜಾತಿಗಳ ಕುರಿತು ಪ್ರಕಟಿಸಿದೆ.

----2

ಸರ್ಕಾರದ ಅಧಿಸೂಚನೆ ಸಂಖ್ಯೆ: HUD/636/MLR/95 ರಲ್ಲಿ ನಗರಸಭೆ, ಮಹಾನಗರ ಪಾಲಿಕೆಗಳು, ಪಟ್ಟಣ, ಪುರಸಭೆಗಳು ಮತ್ತು ಪಟ್ಟಣ ಪಂಚಾಯತ್‌ಗಳಲ್ಲಿ ಸದಸ್ಯರ ಸ್ಥಾನಗಳು/ ಪದಾಧಿಕಾರಿಗಳ ಹಿಂದುಳಿದ ಸ್ಥಾನಗಳ ವರ್ಗಗಳಿಗೆ (Backward Classes) ಮೀಸಲು ನೀಡುವ ಉದ್ದೇಶಕ್ಕಾಗಿ, ಪ್ರವರ್ಗ "ಎ" (Category "A" ) ಮತ್ತು ಪ್ರವರ್ಗ "ಬಿ"(Category "B" ) ಗಳಿಗೆ ಸೇರುವ ಜಾತಿಗಳ ಕುರಿತು ಪ್ರಕಟಿಸಿರುತ್ತದೆ. ಸರ್ಕಾರವು ದಿನಾಂಕ:31.1.1995 ರಲ್ಲಿ ಹೊರಡಿಸಲಾದ ಆದೇಶ ಸಂಖ್ಯೆ:ಸಕಇ/251/94, ಬೆಂಗಳೂರು ದಿನಾಂಕ:31.01.1995ದಲ್ಲಿ ಒಟ್ಟು ಮೀಸಲಾತಿ ಪ್ರಮಾಣವು ಶೇ.50ಕ್ಕೆ ಮೀರದಂತೆ, ಪ್ರವರ್ಗ I, II (ಎ), II (ಬಿ), III (ಎ), III (ಬಿ), ಗಳಲ್ಲಿ ವರ್ಗೀಕರಿಸಲಾದ ಜಾತಿಗಳ ಪಟ್ಟಿಯು ಸರ್ಕಾರದ ಆದೇಶ ಸಂಖ್ಯೆ:ಸಕಇ/150/ಬಿಸಿಎ/94, ದಿನಾಂಕ:17.09.1994ರ ಅನುಬಂಧಗಳಲ್ಲಿನ ಜಾತಿಗಳಿಗೆ ಭಾರತ ಸಂವಿಧಾನದ ಅನುಚ್ಛೇದ 16(4) ರನ್ವಯ ನೇಮಕಾತಿ ಮೀಸಲಾತಿಗೆ ಅನ್ವಯಿಸುವುದಾಗಿ ಆದೇಶಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: SWD/225/BCA/2000 ದಿನಾಂಕ:30.03.2002 ರಲ್ಲಿ ದಿನಾಂಕ:17.09.1994 ಮತ್ತು 31.1.1995 ರಲ್ಲಿ ನಿಗಧಿಪಡಿಸಲಾದ ಮೀಸಲಾತಿ ಪ್ರಮಾಣವನ್ನು ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಮತ್ತು ನೇಮಕಾತಿ ಉದ್ದೇಶಕ್ಕಾಗಿ ಮುಂದುವರಿಸಿರುವುದಾಗಿ ತಿಳಿಸಿದೆ. ಅಲ್ಲದೇ ಸರ್ಕಾರವು ಆಗಾಗ್ಗೆ ಹೊರಡಿಸುವ ಆದೇಶಗಳನ್ನು ಗಮನದಲ್ಲಿಟ್ಟುಕೊಂಡು ಸಕ್ಷಮ ಪ್ರಾಧಿಕಾರಿಯವರು ಸಂಬಂಧಿಸಿದ ಉದ್ದೇಶಕ್ಕೆ ಅನುಗುಣವಾಗಿ ದೃಢೀಕರಣವನ್ನು ನೀಡುವ ಅಧಿಕಾರ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ತಹಸೀಲ್ದಾರರಿಂದ ಸೂಕ್ತ ದೃಢೀಕರಣ ಪತ್ರವನ್ನು ಚುನಾವಣೆಗೆ ಸಂಬಂಧಿಸಿದಂತೆ ಪಡೆಯಲು ನಿರ್ದೇಶಿಸಿದೆ.

**ತಮ್ಮ ವಿಶ್ವಾಸಿ,**

(ಎನ್.ಸಿ. ಮುನಿಯಪ್ಪ)
**ಆಯುಕ್ತರು**
**ಸಹಕಾರ ಚುನಾವಣಾ ಆಯೋಗ**

**ಪ್ರತಿಯನ್ನು:**

1. ಜಿಲ್ಲಾಧಿಕಾರಿಗಳು, ------------------ ಜಿಲ್ಲೆ ರವರಿಗೆ ಕಳುಹಿಸುತ್ತಾ, ವಿಷಯದ ಕುರಿತಂತೆ ಸಂಬಂಧಿಸಿದ ತಾಲ್ಲೂಕಿನ ತಹಸೀಲ್ದಾರ್ ರವರಿಗೆ ಸೂಕ್ತ ಸೂಚನೆಗಳನ್ನು ನೀಡಲು ಕೋರಿದೆ.
2. **ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ**
   ಸಹಕಾರ ಸಂಘಗಳ ಸಹಾಯಕ ನಿಬಂಧಕರು, --------------------- ಉಪವಿಭಾಗ- ------------------ ರವರಿಗೆ ಕಳುಹಿಸಿದೆ.